◆ **ಇವೆಲ್ಲ ಇಂತಿಂಥ ಕಾರ್‍ಯೆವು ಇದ್ದಾಗಲೇ ಹಾಡಬೇಕಾದಂಥ ಪದಗಳು. ಈಗೀಗ ಮಂದಿ ಕಾರ್‍ಯೇವುಗಳನ್ನು ಮಾಡದೇ ಬುಟ್ಟುಬುಟ್ಟಾರ. ಹಂಗಾಗಿ ಇವು ಮುಂದಿನ ಪೀಳಿಗಿಗೆ ಉಳೀತಾವ ಅಂತ ಅನಸುತ್ತಾ ಅಮ್ಮಾ?**

ಅದೂನೂ ಖರೇವಾದ ಬುದ್ರೀ. ಈಗ ನೋಡ್ರೀ ಸಣ್ಣ ವಯಸಿಗೇ ಹುಡುಗ್ರು ಮೈ ನೆರಿತ್ತಾರ. ಅವು ಸಾಲಿಗೆ ಹೋಗ್ತಿರ್ತಾವ. ಅವುಕ್ಕ ನಾಚಿಕೆ ಅನಸುತ್ತ ಅಂತ ಕುಂದರಸಾದೇ ಬುಟ್ಟಾರ. ಹಂಗಾಗಿ ಮೈನೆರೆದಲ್ಲಿ ಹಾಡ ಪದಗಳು ಅಂಗೇ ಮೂಲಿಗಾಗ್ಯಾವ.

ಸೋಬಾನ ಕಾರ್‍ಯ ಗೂಡ ಓದಿಕೆಂಡೋರು ನಾಚಿಕೆಂತಾರ ಅಂತ ಫಂಕ್ಷನ್ ಮಾಡದು ಬುಟ್ಟಾರ. ಸೋಬಾನ ಪದಗಳು ಅಂಗೇ ಮೂಲಿಗಾಗ್ಯಾವ.

ಬೀಸಕಲ್ಲು, ಒಳಕಲ್ಲು ಹೋಗಿ ಮಿಕ್ಸರ್ ಬಂದ ಮ್ಯಾಲೆ ಬೀಸಪದಗಳು, ಕುಟ್ಟ ಪದಗಳು ಮೂಲೆ ಸೇರಿಕಂಡಾವ. ಆದ್ರೆ ಹಳ್ಳ್ಯಾಗ ಇವು ಜಾಸ್ತಿ ಉಳಕಂಡಾವ್ರೀ. ಅಲ್ಲಿ ಇನ್ನ ಪದ ಹಾಡೋರೂ ಐದಾರ್‍ರೀ. ಹೆಂಗೆಂಗ ಊರುಗಳು ಪಟ್ಟಣ ಆಕ್ಯಾಂತ ಹೋಗ್ತಾವ ಹಂಗಂಗ ಇವೆಲ್ಲ ಹಾಡದು ಹಿಂದಕ ಆಕ್ಯಾಂತ ಹೋಗಕತ್ತ್ಯಾದ್ರಿ. ನಮ್ಮನ್ಯಾಗಂತೂ ಏಸು ಕಾರಣಗಳು ಆಗ್ಯಾವ ಅಷ್ಟು ಕಾರಣಗಳಿಗೂ ನಾನು ಹಾಡೀನ್ರಿ. ಮೊದಲೆಲ್ಲ ನಮ್ಮ ಓಣ್ಯಾಗ, ನಮ್ಮ ಊರಾಗ ಯಾವುದೇ ಮುಹೂರ್ತಕ್ಕ ನನ್ನ ನೆನಿಸಿಕೆಂಡು ಹಾಡಾಕ ಕರ್‍ರ್ಯಾಕ ಕಳುಸ್ತಿದ್ರು. ಏನಂದ್ರೆ ಮೊದಲಿನವರೀಗಿ ಇಷ್ಟರಿ ಪದ ಕೇಳಕ. ಈಗಿನವರಿಗಿ ಇಲ್ಲ.

◆ **'ಗಂಡನ ಪಾದಪೂಜಿ ಮಾಡ ನಮ್ಮವ್ವ / ಗಂಡನ ಪಾದ ಮನಿ ದೇವರವ್ವ' ಅಂತ ಪದ ಹಾಡಿದ್ಯಲ್ಲಮ್ಮ. ಗಂಡು ಹೆಣ್ಣು ಇಬ್ರನ್ನೂ ಸೃಷ್ಟಿ ಮಾಡಿದವನು ದೇವರು. ಹಿಂಗಿರುವಾಗ ಹೆಣ್ಮಕ್ಕಳು ಯಾಕ ಗಂಡನ ಪಾದಪೂಜಿ ಮಾಡಬೇಕು?**

ಗಂಡ ಎಷ್ಟಿದ್ರೆ ಗಂಡನೇರಿ. ಅವರ ಸರಿಸಮ ನಾವು ಎಂಗಾಗ್ತೀವಿ? ಅತನ ಸರಿಸವನ ನಾನೂ ಮಾಡ್ತೀನಿ ಅಂತ ಹೆಣಮಗಳು ತಯಾರಾದ್ರೆ ಸಂಸಾರ ಎಂಗಾಗತಾದ್ರಿ?

ಈಗಿನ ಹೆಣಮಕ್ಕಳು ಓದಿಕ್ಯಂಡಾರ, ನೌಕ್ರಿ ಮಾಡ್ತಾರ. ಕೈಯಾಗ ರಕ್ಕ ಆಡತಾವ. ಹಂಗಾಗಿ ಅವರು ಗಂಡನ ಸರಿಸವನ ತಾವು ಅಂತ ತಿಳಕಂಡಾರ ಅಷ್ಟೇ. ನಾನಂತೂ ಗಂಡನ್ನ ದೇವರಂತನೇ ನೋಡಿಕೆಂಡಿನ್ರೀ.

◆ **ಆಗಿನ ಕಾಲಕ್ಕೇ ಹತ್ತನೇ ಕ್ಲಾಸು ಓದಿಕ್ಯಂಡಕೆಮ್ಮ ನೀನು. ನಿನಗೂ ನೌಕರಿ ಅಂತ ಸಿಕ್ಕಿದ್ರೆ ಇವಾಗ ಮಾತಾಡಿದಂಗ ಮಾತಾಡ್ತಿದ್ಯಾ?**

ನನಗ ನೌಕರಿ ಬಂದಿತ್ರಿ. ಗಂಡ ಬ್ಯಾಡಂದ. ಮೊದಲು ಹಿರೇಬೂದೂರಿಗಿ ಟೀಚರಾಗಿದ್ದೆ. ಮೂರು ತಿಂಗಳು ಕೆಲಸ ಮಾಡಿದೆ. ಬ್ಯಾಡಂದ್ರು. ಬುಟ್ಟುಬುಟ್ಟೆ. ಆಮ್ಯಾಲೆ ಲಿಂಗಸೂಗೂರು ತಾಲೂಕು ಹೊನ್ನಳ್ಳಿಗೆ ಟೀಚರ್ ಅಂತ ಬಂತು. ಎಂಟು ದಿವಸ ಕೆಲಸ ಮಾಡಿದೆ. ಬ್ಯಾಡಂದ್ರು. ಬುಟ್ಟುಬುಟ್ಟೆ. ನಾನೂ ಓದಿದಕಿನೇ, ನೌಕರಿ ಮಾಡಿದಕೀನೇ. ಹಂಗಿದ್ದೂ ನನಗ ಗಂಡನೇ ದೇವ್ರು ನೋಡ್ರೀ. ನಾವೆಲ್ಲ ಕೂಡಿ ಬೆಳದವ್ರು. ನಮಗ ಹಿರೇರು ಕಲಿಸಿದ ಪಾಠ ಅದು.

◆ **ಎರಡೆರಡು ಸರತಿ ನೌಕರಿ ಬುಡಿಸಿದ ಅಂತ ನಿನಗ ಯಜಮಾನನ ಮ್ಯಾಲೆ ಸ್ವಲ್ಪನ್ನ ಸಿಟ್ಟು ಇರಬೇಕಲ್ಲಮ್ಮ? ನಾನು ನೌಕರಿ ಮಾಡಿದ್ರೇ ಚೊಲಿತ್ತು ಅಂತ ಒಮ್ಮೆನ್ನ ಅನಿಸಿರಬೇಕಲ್ಲ?**

ಅತ ಏನು ಸುಮ್ಮನೆ ಬಿಡಿಸ್ಲಿಲ್ರೀ. ನಾವೆಲ್ಲರು ಕೂಡಿ ಇದ್ವಿ. ಮನ್ಯಾಗ ಕಣ್ಣು ಕಾಣದ ಮುದೆಕಿ